**LAC No**: 253/2004 **R.W**:1

**ದಿನಾಂಕ : 24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ 2ನೇ ಎದುರುದಾರರ ಪರ ಶ್ರೀ. ಎಸ್.ಹೆಚ್.ಎಂ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

**ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದ**

ಕಾಲುವೆಗೆ ಭೂಸ್ವಾಧೀನವಾದರೆ ನಮ್ಮ ಕಚೇರಿಗೆ ಬರುತ್ತದೆ, ಶೀತಪೀಡಿತ ಪ್ರದೇಶಕ್ಕೆ ಸವಾಧೀನವಾದರೆ ಎಸ್ ಎಲ್ ಓ ಕಚೇರಿಗೆ ಬರುತ್ತದೆ ಎಂದರೆ ಹೌದು. ಈ ಪ್ರಕರಣವು ತಟ್ಟೇಕರೆ ಗ್ರಾಮದ ಶೀತಪೀಡಿತ ಪ್ರದೇಶಕ್ಕಾಗಿ ಮನೆ ಭೂಸ್ವಾಧೀನಾವಾಗಿದ್ದು, ಇದು ನಮ್ಮ ಕಚೇರಿಯ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸಾಕ್ಷಿ ಕೆಲವೊಂದು ಸಾರಿ ಬೆನಿಫಿಶಿಯರಿ ಎಂದು ನಮ್ಮನ್ನು ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ಶೀತಪೀಡಿತ ಪ್ರದೇಶಕ್ಕಾಗಿ ಮಾಡಿದ ಭೂಸ್ವಾಧೀನ ಪ್ರಕ್ರಿಯೆಯನ್ನು ಎಸ್ ಎಲ್ ಓ ರವರೇ ಮಾಡುತ್ತಿದ್ದು, ನಮಗೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕಟ್ಟಡಗಳು ಇದ್ದರೆ ಅವುಗಳ ಮಾಹಿತಿ ಮತ್ತು ವರದಿಯನ್ನು ನಮ್ಮಿಂದಲೇ ಪಡೆಯುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ನಿಪಿ 16 ರ ತೀರ್ಪು ಕಡವಿನಬಾಚನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ್ದು ಎಂದರೆ ಇರಬಹುದು. ನಿಪಿ 16 ರ ತೀರ್ಪು ಕಡವಿನಬಾಚನಹಳ್ಳಿ ಗ್ರಾಮಕ್ಕೆ ಸಂಬಂದಿಸಿದ್ದು, ಅದರಲ್ಲಿ ಜಿಲ್ಲಾ ನ್ಯಾಯಾಲಯ 500/- ಚದರಿ ಮೀಟರ್ ಹೆಚ್ಚುವರಿ ಪರಿಹಾರವನ್ನು ಆದೇಶ ಮಾಡಿರುತ್ತಾರೆ ಎಂದರೆ ಹೌದು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಾ ಅರ್ಜಿದಾರರಿಗೆ ಹೆಚ್ಚಿನ ಪರಿಹಾರ

**LAC No**: 253/2004 **R.W**:1

ಕೊಡಬಾರದು ಎನ್ನುವ ದುರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ.ದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.